# ಕಾಡಂಚಿನ ಬದುಕು | ಮಕ್ಕಳು ಕಲಿತಿರುವ ಪಾಠಗಳು

ಅಂಕಿತ್ ಶುಕ್ಲಾ



ಮನುಷ್ಯ ಚಟುವಟಿಕೆಗಳಿಂದ ದೂರ ಉಳಿದ ಕಾಡು, ಅನೇಕ ಜಾತಿಯ ಗಿಡಮರಗಳು, ಪೊದೆ ಬಳ್ಳಿಗಳು ಹಾಗೂ ಪ್ರಾಣಿ - ಪಕ್ಷಿಗಳಿಗೆ ನೆಲೆವೀಡಾಗಿರುತ್ತದೆ. ಆದರೆ ಮರ ಗಿಡಗಳನ್ನು ಕಡಿದಾಗ, ಭೂಮಿ ತನ್ನ ನೈಸರ್ಗಿಕ ಅರಣ್ಯದ ಆವರಣವನ್ನು ಕಳೆದುಕೊಳ್ಳುವುದಷ್ಟೇ ಅಲ್ಲ, ಈ ಪ್ರಾಣಿಗಳು ತಮ್ಮ ಸಹಜ ವಾಸಸ್ಥಾನವನ್ನು ಕಳೆದುಕೊಳ್ಳುತ್ತವೆ ಮತ್ತು ನಿಧಾನವಾಗಿ ಅಳಿವಿನಂಚಿಗೆ ಸಾಗುತ್ತವೆ. ಪ್ರಾಕೃತಿಕ ಪರಿಸರದ ಸಮತೋಲನವನ್ನು ಭಂಗಗೊಳಿಸುವ ಮತ್ತು ಅಂತಿಮವಾಗಿ ಅದನ್ನು ಹಾಳುಮಾಡುವ ಮಾನವ ಅತಿಕ್ರಮಣದ ಅನೇಕ ಉದಾಹರಣೆಗಳಿವೆ. ಬಹುಪಾಲು ವಿದ್ಯಾರ್ಥಿಗಳಿಗೆ ಈ ಸಂಗತಿಗಳ ಕುರಿತು ಒಂದಿಷ್ಟು ಅರಿವಿದೆಯಾದರೂ, ವಾಸ್ತವಿಕ ಸಂಗತಿಗಳನ್ನು ಮತ್ತೆಮತ್ತೆ ಹೇಳಿ ಮನದಟ್ಟಾಗಿಸಲು, ನಮ್ಮ ಪರಿಸರ ವ್ಯವಸ್ಥೆಯ ಬಗ್ಗೆ ಮತ್ತು ಪ್ರಕೃತಿಯು ಪ್ರವಾಹ, ತಾಪಮಾನ ಏರಿಕೆಗಳಂತಹ ನೈಸರ್ಗಿಕ ವಿಕೋಪಗಳ ಮೂಲಕ ನಮ್ಮ ಮೇಲೆ ತಿರುಗಿ ಬೀಳದಂತೆ ಅದರಲ್ಲಿನ ಸಮತೋಲನವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ನಾವೇನು ಮಾಡಬಲ್ಲೆವು ಎನ್ನುವುದರ ಅರಿವು ಮೂಡಿಸಲು ನಿರಂತರವಾದ ಸಂವಾದದ ಅಗತ್ಯವಿದೆ.

## ಪ್ರಕೃತಿ ಶಿಬಿರ

ನದಿ, ಕಾಡು, ಗುಡ್ಡ ಬೆಟ್ಟ ಮುಂತಾದ ಜಾಗಗಳಿಗೆ ಭೇಟಿ ನೀಡುವುದರ ಮೂಲಕ ಪ್ರಕೃತಿಯನ್ನು ಅನ್ವೇಷಿಸುವುದು, ಅವುಗಳ ಬಗ್ಗೆ ಪುಸ್ತಕಗಳಲ್ಲಿ ಓದುವುದಕ್ಕಿಂತಲೂ ಹೆಚ್ಚು ಪರಿಣಾಮಕಾರಿ. ಟೆಟ್ಸುಕೋ ಕುರೊಯನಾಗಿ (Tetsuko Kuroyanagi) ಅವರ, ತೊತ್ತೋ-ಚಾನ್: ದ ಲಿಟ್ಲ್ ಗರ್ಲ್ ಅಟ್ ದ ವಿಂಡೋ (Totto-Chan: The Little Girl at the Window) ಎಂಬ ಪುಸ್ತಕದಲ್ಲಿ ಇದನ್ನು ಹೇಳಲಾಗಿದೆ. ಈ ಕಥೆಯಲ್ಲಿ, ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳನ್ನು ಕಾಡಿಗೆ ಕರೆದುಕೊಂಡು ಹೋಗುತ್ತಾರೆ ಮತ್ತು ಅಲ್ಲಿ ನೋಡಿದ ಮರಗಿಡ ಮತ್ತು ಇತರ ಸಂಗತಿಗಳ ಬಗ್ಗೆ ಮಕ್ಕಳ ಅನಿಸಿಕೆಗಳನ್ನು ಆಲಿಸುತ್ತಾರೆ. ಆಗ ಅವರಿಗೆ ತನ್ನ ವಿದ್ಯಾರ್ಥಿಗಳಿಗೆ ಪ್ರಕೃತಿಯ ಕುರಿತಾದ ಜ್ಞಾನ ಎಷ್ಟು ಮುಖ್ಯ ಎನ್ನುವುದು ಸ್ಪಷ್ಟವಾಗಿ ಅರ್ಥವಾಗುತ್ತದೆ.

ಈ ಕಥೆಯಿಂದ ಸ್ಫೂರ್ತಿ ಪಡೆದ ನಾವು ಕೆಲವು ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿಗಳು ಸರ್ಕಾರಿ ಶಾಲೆಯೊಂದರ ಕೆಲವು



ಚಿತ್ರ 1 : ಪ್ರಕೃತಿ ಸಂಚಾರಕ್ಕೆ ಹೊರಟಿರುವ ವಿದ್ಯಾರ್ಥಿಗಳು

ಮಕ್ಕಳೊಂದಿಗೆ ಹತ್ತಿರದ ಕಾಡೊಂದಕ್ಕೆ ಭೇಟಿ ನೀಡುವ ಯೋಜನೆಯನ್ನು ಹಾಕಿದೆವು. ನಾವು ಈ ಚಟುವಟಿಕೆಯನ್ನು ಬೇಸಿಗೆ ಶಿಬಿರದ ವೇಳೆಯಲ್ಲಿ ಆಯೋಜಿಸಿದೆವು. ಚಿತ್ರ ಬಿಡಿಸುವುದು, ಬಣ್ಣ ತುಂಬುವುದು ಮತ್ತು ಪದ್ಯಗಳನ್ನು ವಾಚಿಸುವುದು ಇತ್ಯಾದಿ ಚಟುಚಟಿಕೆಗಳ ಮೂಲಕ ಪ್ರತಿಯೊಂದು ಮಗುವಿನ ಬಗ್ಗೆಯೂ ತಿಳಿದುಕೊಳ್ಳತೊಡಗಿದೆವು. ಮಕ್ಕಳ ಜೊತೆಗೆ ಒಮ್ಮೆ ಬಾಂಧವ್ಯ ಬೆಳೆದ ನಂತರ ಪ್ರಕೃತಿ ಸಂಚಾರಕ್ಕೆ ಹೋಗಲು ನಿರ್ಧರಿಸಿದೆವು.

ಸಂಚಾರದ ವೇಳೆ, ವಿವಿಧ ಗಿಡಮರಗಳ ಬಗ್ಗೆ, ಜಲಮೂಲಗಳ ಬಗ್ಗೆ ಮತ್ತು ಇವುಗಳಿಗೆ ಸಂಬಂಧಿಸಿದಂತೆ ಅವರ ಹಳ್ಳಿಗಳಲ್ಲಿ ನಡೆಯುವ ಆಚರಣೆಗಳ ಬಗ್ಗೆ ಮಕ್ಕಳಿಗೆ ಬಹಳಷ್ಟು ಗೊತ್ತು ಎನ್ನುವುದು ನಮಗೆ ತಿಳಿಯಿತು. ನಮಗೆ ಎದುರಾದ ವಿವಿಧ ಜಾತಿಯ ಮರಗಳ ವಿಶಿಷ್ಟ ಗುಣಲಕ್ಷಣಗಳ ಬಗ್ಗೆ ಅವರು ಮಾತನಾಡಿದರು. ಯಾವ ಮರದಿಂದ ಯಾವ ಹಣ್ಣು ಸಿಗುತ್ತದೆ, ಅದನ್ನು ಬಳಸುವುದು ಹೇಗೆ, ಅದು ಹಣ್ಣೋ ತರಕಾರಿಯೋ ಎಂಬುದನ್ನು ಅವರು ತಿಳಿದಿದ್ದರು.

ಅವರ ಹಳ್ಳಿಯು ಕಾಡಿಗೆ ಬಹಳ ಸಮೀಪದಲ್ಲಿತ್ತು. ನೀರಿನಂತಹ ಅನೇಕ ಸಂಪನ್ಮೂಲಗಳು ಹೇರಳವಾಗಿದ್ದವು. ಬಹುತೇಕ ಪ್ರತಿಯೊಂದು ಮನೆಯಲ್ಲಿಯೂ ಒಂದೊಂದು ಬಾವಿ ಇದ್ದು ಅದನ್ನವರು ಉಪಯೋಗಿಸುತ್ತಿದ್ದರು. ಅದರ ನೀರನ್ನು ಯಾವುದಕ್ಕೆ ಬಳಸಲಾಗುತ್ತದೆ ಎಂಬುದನ್ನು ಅವಲಂಬಿಸಿ ಮಕ್ಕಳು ಪ್ರತಿಯೊಂದು ಬಾವಿಗೂ ಒಂದೊಂದು ಹೆಸರನ್ನು ಬಳಸುತ್ತಿದ್ದರು. ಉದಾಹರಣೆಗೆ, ಹೊಲಗದ್ದೆಗಳಿಗೆ ನೀರುಣಿಸಲು ಬಳಸುತ್ತಿದ್ದ ಬಾವಿಯನ್ನು ನೀರಾವರಿ ಬಾವಿ ಎಂದು ಕರೆಯುತ್ತಿದ್ದರು. ಕಾಡಿನಲ್ಲಿ ಮತ್ತು ಅವರ ಹಳ್ಳಿಯಲ್ಲಿ ಸಂಚರಿಸಿದ ಮೇಲೆ ನಾವು ಮಕ್ಕಳೊಡನೆ ಮರಗಳ ಉಪಯೋಗದ ಬಗ್ಗೆ ಚರ್ಚಿಸಿದೆವು. ಅವರ ಉತ್ತರಗಳನ್ನು ಕೇಳಿ ನಮಗೆ ಆಶ್ಚರ್ಯವಾಯಿತು. ಅವರಿಗೆ ಎಷ್ಟೊಂದು ತಿಳಿದಿತ್ತು! ತಮ್ಮ ಜೀವನೋಪಾಯವು ನಡೆಯುವುದು ಕಾಡಿನಿಂದಲೇ ಎನ್ನುವುದು ಅವರಿಗೆ ಗೊತ್ತಿತ್ತು. ಅಲ್ಲಿ ಸಿಗುವ ಹಣ್ಣುಗಳನ್ನು ಅವರು ತಿನ್ನುತ್ತಿದ್ದರು. ತಮ್ಮ ಆದಾಯದ ಪ್ರಮುಖ ಮೂಲವಾದ ಇಪ್ಪೆ (ಮಹುವಾ) ಮರದ ಬೀಜಗಳನ್ನು ಹೆಕ್ಕುತ್ತಿದ್ದರು. ಬೀಡಿ ಕಟ್ಟಲು ಬಳಸುವ ಬೀಡಿ ಎಲೆ ಮರ/ತುಪ್ರ ಮರದ (tendu patta) ಎಲೆಗಳು ಅವರ ಆದಾಯದ ಮತ್ತೊಂದು ಮೂಲವಾಗಿದ್ದವು. ಕಾಡಿನಿಂದ ಎಲೆಗಳನ್ನು ಕಿತ್ತು ತಂದು, ಕಟ್ಟು ಕಟ್ಟಿ ಹೇಗೆ ಒಣಗಿಸಲಾಗುತ್ತದೆ ಎಂಬ ಇಡೀ ಬೀಡಿ ಕಟ್ಟುವ ಪ್ರಕ್ರಿಯೆ ಅವರಿಗೆ ತಿಳಿದಿತ್ತು. ಮಕ್ಕಳು, ಅಡುಗೆಯಲ್ಲಿ ಬಳಸುವ ಕಮಲದ ಗಿಡದ ವಿವಿಧ ಭಾಗಗಳ ಬಗ್ಗೆ ಅಂದರೆ, ಸ್ವಾದಿಷ್ಟವಾದ ಮೇಲೋಗರ/ಗೊಜ್ಜು ಪಲ್ಯ ತಯಾರಿಸಲು ಬಳಸುವ ಅದರ ದಂಟು ಮತ್ತು ಹೂವಿನ ಒಳಭಾಗದಲ್ಲಿರುವ ಚಿಕ್ಕ ಸಿಹಿ ಬೀಜಗಳ ಬಗ್ಗೆ ಕೂಡ ಮಾತನಾಡಿದರು.

ನಂತರ ಚರ್ಚೆಯು ಅವರ ಹಳ್ಳಿಯಲ್ಲಿರುವ ಸಣ್ಣ ಅಣೆಕಟ್ಟೆಯತ್ತ ತಿರುಗಿತು. ಅದನ್ನು ನೀರಾವರಿಗೆ ಹೇಗೆ ಬಳಸಲಾಗುತ್ತದೆ ಮತ್ತು ನೀರು ಕೊಯ್ಲು ಇತ್ಯಾದಿ ಅದರ ಬಳಕೆ ಮತ್ತು ಉಪಯೋಗದ ಬಗ್ಗೆ ವಿವರವಾಗಿ ಚರ್ಚೆ ನಡೆಯಿತು. ಆರಂಭದಲ್ಲಿ ಮಕ್ಕಳು ತಾವು ನೀರಾವರಿಗೆ ಹೇಗೆ ನದಿಗಳ ಮೇಲೆ ಅವಲಂಬಿತರಾಗಿದ್ದೇವೆ ಎಂಬುದರ ಬಗ್ಗೆ ಮಾತನಾಡಿದ್ದರು. ಮತ್ತಷ್ಟು ಕೆದುಕುತ್ತಾ ಮುಂದುವರಿದಾಗ, ಅವರು ನೀರಾವರಿಗೆ ಒಂದಲ್ಲ ಒಂದು ರೀತಿಯಲ್ಲಿ ಮಳೆಯನ್ನು ಆಶ್ರಯಿಸಿರುವುದು ತಿಳಿದುಬಂತು. ಈ ಚರ್ಚೆ ಮುಗಿದ ಮೇಲೆ ನಾವು ಆ ಸಣ್ಣ ಅಣೆಕಟ್ಟೆಯ ಬಳಿ ವಿಹಾರಕ್ಕೆಂದು ಹೋದೆವು. ಅವರು ಒಲೆ ಹೂಡಿ ಅಡುಗೆ ಮಾಡಿದರು. ಅದಕ್ಕೆ ಬೇಕಾಗಿದ್ದ ಸೌದೆಯನ್ನು ಅಲ್ಲಿಯೇ ಸುತ್ತಮುತ್ತ ಕಲೆಹಾಕಿದರು. ಇದನ್ನೆಲ್ಲ ಮಾಡುವಾಗ ಮಕ್ಕಳು ಕಸ ಚೆಲ್ಲಲಿಲ್ಲ. ಅವರು ತಮ್ಮ ಮನೆಯ ಹಿತ್ತಲಿನಲ್ಲಿಯೇ ಬೆಳೆದ ತರಕಾರಿಗಳನ್ನು ಬಳಸಿದ್ದರು. ನಾವೆಲ್ಲ ಊಟಕ್ಕಾಗಿ ಮರದ ಎಲೆಗಳನ್ನು ಮಡಚಿ, ಅವುಗಳಿಗೆ ಕಡ್ಡಿಗಳನ್ನು ಚುಚ್ಚಿ ತಟ್ಟೆಗಳನ್ನು ತಯಾರಿ ಮಾಡಿಕೊಂಡೆವು. ಅವರು ಇದನ್ನೆಲ್ಲ ಮಾಡುವುದನ್ನು ಗಮನಿಸಿ, ಹಳ್ಳಿಯಲ್ಲಿರುವ ಮಕ್ಕಳು ಅದಾಗಲೇ ಸುಸ್ಥಿರವಾದ ಬದುಕನ್ನು ಬದುಕುತ್ತಿದ್ದಾರೆ ಎಂಬುದನ್ನು ನಾನು ಮನಗಂಡೆ.

## ಸರ್ಕಾರಿ ಯೋಜನೆಗಳ ಬಗ್ಗೆ ತಿಳಿಯಪಡಿಸಿದ್ದು

ಛತ್ತಿಸ್‌ಗಢ್‌ನ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡಾಗ, ಎಲ್ಲರೂ ಕಾಪಾಡಿಕೊಳ್ಳಬೇಕಾದ ನಾಲ್ಕು ಗುರುತುಗಳನ್ನು ರಾಜ್ಯಕ್ಕೆ ನೀಡಿದ್ದರು. ಅವು, ನರ್ವ (ನೀರಿನ ವ್ಯವಸ್ಥೆ), ಗರ್ವ (ಪಶು ಸಂಪತ್ತು), ಘುರ್ವ (ಗೊಬ್ಬರದ ಗುಂಡಿ/ತಿಪ್ಪೆ) ಮತ್ತು ಬಾರಿ (ಕೈ ತೋಟ/ ಹಿತ್ತಿಲು ತೋಟ).





ಚಿತ್ರ 2: ಕಮಲ ಫಲ



ಚಿತ್ರ 3 : ವನ ವಿಹಾರದಲ್ಲಿ ಸಿದ್ಧವಾಗುತ್ತಿರುವ ಆಹಾರ

ಅಂತರ್ಜಲ ಮರುಪೂರಣ, ನೀರಾವರಿ ಮತ್ತು ಸಾವಯವ ಕೃಷಿ ಯೋಜನೆಗಳ ಮೂಲಕ ಕೃಷಿಕರಿಗೆ ಎರಡು ಬೆಳೆಗಳನ್ನು ಬೆಳೆಯಲು ಸುಲಭವಾಗುತ್ತದೆ, ಜಾನುವಾರುಗಳನ್ನು ಸರಿಯಾಗಿ ನೋಡಿಕೊಳ್ಳಲು ಸಾಧ್ಯವಾಗುತ್ತದೆ, ಪಾರಂಪರಿಕ ಕೈ ತೋಟ/ ಹಿತ್ತಿಲು ತೋಟ ಮತ್ತು ಗ್ರಾಮೀಣ ಆರ್ಥಿಕತೆ ಬಲಗೊಳ್ಳುತ್ತದೆ ಮತ್ತು ಎಲ್ಲ ಜನರ ಪೌಷ್ಟಿಕಾಂಶದ ಮಟ್ಟ ಸುಧಾರಿಸುತ್ತದೆ ಎನ್ನುವುದು ರಾಜ್ಯ ಸರ್ಕಾರದ ನಂಬಿಕೆಯಾಗಿದೆ. ತಮ್ಮ ಹಳ್ಳಿಗಳು ಮತ್ತು ಜನಜೀವನದ ಗುಣಮಟ್ಟದ ಮೇಲೆ ನೇರ ಪರಿಣಾಮವನ್ನು ಬೀರುವ ಇಂತಹ ಉಪಕ್ರಮಗಳ ಅರಿವು ಕೂಡ ವಿದ್ಯಾರ್ಥಿಗಳಿಗೆ ಆಗಬೇಕಿದೆ. ನಾವು ಕೆಲಸ ಮಾಡುವ ಶಾಲೆಯೊಂದು ತನ್ನ ಸಮೀಪ ಇರುವ ಗೋಶಾಲೆಯೊಂದಕ್ಕೆ ಶೈಕ್ಷಣಿಕ ಭೇಟಿಯೊಂದನ್ನು ಆಯೋಜಿಸಿತು. ತಮ್ಮ ಪಠ್ಯಪುಸ್ತಕಗಳಲ್ಲಿ ಆ ಉಪಕ್ರಮಗಳ ಕುರಿತು ಓದುವಾಗ ಅವುಗಳ ಜೊತೆಗೆ ಸಂಬಂಧ ಕಲ್ಪಿಸಿಕೊಳ್ಳಲು ಮಕ್ಕಳಿಗೆ ಸಾಧ್ಯವಾಗುವ ಹಾಗೆ ಅವುಗಳನ್ನು ವಾಸ್ತವದಲ್ಲಿ ತೋರಿಸುವುದು ಆ ಭೇಟಿಯ ಉದ್ದೇಶವಾಗಿತ್ತು. ಈ ಸಂಬಂಧವಾಗಿ ಮಕ್ಕಳು ಚಿಕ್ಕದೊಂದು ಪ್ರವಾಸವನ್ನು ಕೈಗೊಂಡರು. ಹಸುಗಳು ಹಾಲು ಕೊಡುವುದಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹೇಗೆ ಉಪಕಾರಿಯಾಗಿವೆ, ಎಷ್ಟು ಸುಲಭವಾಗಿ ಗೊಬ್ಬರವನ್ನು ತಯಾರಿಸಬಹುದು ಮತ್ತಿತರ ಚಿಕ್ಕಚಿಕ್ಕ ವಿವರಗಳನ್ನು ತಿಳಿದುಕೊಳ್ಳುವುದರಲ್ಲಿಯೂ ಅವರು ತುಂಬಾ ಆಸಕ್ತರಾಗಿದ್ದರು. ಈ ಎಲ್ಲ ಸಂವಾದಗಳ ನಂತರ ನಾನು ಹೇಳುವುದೇನೆಂದರೆ, ಹಳ್ಳಿಗಳಲ್ಲಿ ಇರುವ ಮಕ್ಕಳಿಗೆ, ಪ್ರಕೃತಿಗೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಬಗ್ಗೆ ಸಾಕಷ್ಟು ಅರಿವು ಇದೆ. ಅವರು ಬದುಕುವ ರೀತಿಯು ಪರಿಸರ ನಾಶವಾಗದಂತೆ ನೋಡಿಕೊಳ್ಳುತ್ತದೆ. ಅದು ಅವರ ಆದಾಯದ ಪ್ರಮುಖ ಮೂಲ ಅಥವಾ ಅವರ ಜೀವನೋಪಾಯವು ಸಂಪೂರ್ಣವಾಗಿ ಪ್ರಕೃತಿಯನ್ನು ಅವಲಂಬಿಸಿದೆ. ಅದು ಮರಗಿಡಗಳೇ ಆಗಿರಲಿ, ನದಿತೊರೆಗಳೇ ಆಗಿರಲಿ ಅವರು ಅದನ್ನು ಸಂರಕ್ಷಿಸಲು, ಸುಸ್ಥಿರವಾಗಿಡಲು ಪ್ರಯತ್ನಿಸುತ್ತಾರೆ. ಹಾಗಿದ್ದಲ್ಲಿ ಮಾತ್ರ ಅವರಿಗೆ ಪ್ರಾಕೃತಿಕ ಸಂಪತ್ತು ನಿರಂತರವಾಗಿ ಪೂರೈಕೆಯಾಗುತ್ತದೆ ಮತ್ತು ಅದೇ ವೇಳೆಗೆ ನೈಸರ್ಗಿಕ ಜಗತ್ತು ನಾಶವಾಗದೇ ಉಳಿಯುತ್ತದೆ.



ಚಿತ್ರ 4 : ಗೋಶಾಲೆಗೆ ಭೇಟಿ ನೀಡಿದ ಮಕ್ಕಳು

**ಕೃತಜ್ಞತೆ**

ತಮ್ಮನ್ನು ಈ ಬೇಸಿಗೆ ಶಿಬಿರದಲ್ಲಿ ಸೇರಿಸಿಕೊಂಡಿದ್ದಕ್ಕೆ ಮತ್ತು ತಾವು ಪಡೆದ ಅನುಭವಕ್ಕಾಗಿ, ಲೇಖಕರು ತಮ್ಮ ಸಹೋದ್ಯೋಗಿಗಳಾದ ಸ್ನೇಹಾ ಮತ್ತು ನೀರಜ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾರೆ

**ಪರಾಮರ್ಶನ**

IGNOU Document (Unit 1: स्वयं के पर्यावरण को समझना)

https://www.downtoearth.org.in/hindistory///how-narwa-garwa-ghurwa-will-improve-rural-economy-of-chhattisgarh-65218



**ಅಂಕಿತ್ ಶುಕ್ಲಾ** ಅವರು ಲಕ್ನೋದ ಉತ್ತರಪ್ರದೇಶ ಟೆಕ್ನಿಕಲ್ ಯುನಿವರ್ಸಿಟಿಯಿಂದ ಎಂಬಿಎ ಮತ್ತು ಬಿ.ಟೆಕ್ ಪದವಿಗಳನ್ನು ಪಡೆದಿದ್ದು, 2017ರ ಮಾರ್ಚ್‌ನಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಫೆಲೋಶಿಪ್ ಕಾರ್ಯಕ್ರಮಕ್ಕೆ ಸೇರಿದರು. ತಮ್ಮ ಫೆಲೋಶಿಪ್ ಮುಗಿಸಿದ ನಂತರ ರಾಯಗಢ್ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸತೊಡಗಿದರು. ಈಗ ಇವರು ಗಣಿತದ ಬೋಧನಾ ವಿಧಾನಕ್ಕೆ ಸಂಬಂಧಿಸಿದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರ ಕಾರ್ಯಕ್ಷೇತ್ರದ ಬಹುಭಾಗವು ವಸ್ತುವಿಷಯ, ದೃಷ್ಟಿಕೋನ ಮತ್ತು ಗಣಿತದ ಬೋಧನಾ ವಿಧಾನದ ಮೇಲೆ ಗಮನವು ಕೇಂದ್ರೀಕೃತವಾಗಿರುವ ಹಾಗೆ ಸರ್ಕಾರೀ ಶಾಲೆಗಳ ಗಣಿತ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿಯನ್ನು ಬೆಂಬಲಿಸುವುದಾಗಿದೆ. ಇವರು ಸರ್ಕಾರೀ ಶಾಲೆಗಳಲ್ಲಿನ ಮಕ್ಕಳ ಜೊತೆಗೂ ಒಡನಾಟ, ಸಂವಾದದಲ್ಲಿ ತೊಡಗಿಕೊಂಡಿದ್ದಾರೆ. ಅವರನ್ನು ankit.shukla@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** | ಪರಿಶೀಲನೆ: **ನಾಗಮಣಿ ಎಸ್.ಎನ್.**